ಮೌಲ್ಯಮಾಪನವನ್ನು ಮಾಡಬೇಕು. ತಪ್ಪುಗಳನ್ನು ತಿದ್ದಿ ಸರಿಯಾದ ಮಾರ್ಗದರ್ಶನ ನೀಡುವ ಹೊಣೆ ಶಿಕ್ಷಕರದ್ದಾದರೆ, ಅದನ್ನು ಪಾಲಿಸುವ ಜವಾಬ್ದಾರಿ ವಿದ್ಯಾರ್ಥಿಗಳ ಪಾಲಿಗೆ ಇರುತ್ತದೆ.

### ನಿರಂತರ ಓದು

ಹೆಚ್ಚು ಅಂಕಗಳಿಸಲು ಅಥವಾ ಶೈಕ್ಷಣಿಕ ಸಾಧನೆಗೆ ಖಾಸಗಿ ವಿದ್ಯಾಸಂಸ್ಥೆಗಳೇ ಬೇಕು ಎಂದಿಲ್ಲ. ಯಾವ ಸಂಸ್ಥೆಯಲ್ಲೇ ಇದ್ದರೂ, ಯಶಸ್ಸಿನ ಕೀಲಿ ಕೈ ಇರುವುದು ನಿರಂತರ ಓದಿನಲ್ಲಿ. ಗ್ರಾಮೀಣ ಪ್ರದೇಶ, ಪ್ರತಿಷ್ಠಿತ ಪಟ್ಟಿಯಲ್ಲಿ ಇಲ್ಲದ ಸಾಮಾನ್ಯ ಶಾಲೆ ಕಾಲೇಜುಗಳಲ್ಲಿ ಕಲಿತ ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದ ಅನೇಕ ಉದಾಹರಣೆಗಳು ನಮ್ಮ ಮುಂದಿವೆ.

### ಮಾಧ್ಯಮ ಮುಖ್ಯವಲ್ಲ, ಪ್ರಯತ್ನ ಮುಖ್ಯ

ಹೆಚ್ಚು ಅಂಕಗಳಿಸಲು ಮಾಧ್ಯಮದ (ಮೀಡಿಯಂ) ಆಯ್ಕೆಯೂ ಪ್ರಮುಖ ಪಾತ್ರವಹಿಸುತ್ತದೆ ಎಂಬ ಭ್ರಮೆಯೂ ಇದೆ. ಇಂಗ್ಲಿಷ್ ಮಾಧ್ಯಮದಲ್ಲಿ ಓದಿದರೆ ಮಾತ್ರ ಕೆಲಸ ಸಿಗುತ್ತದೆ ಇಲ್ಲದಿದ್ದರೆ ಕಷ್ಟ ಎಂಬ ಮನೋಭಾವ ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿ ಬೆಳೆದಿದೆ. ಇಂದಿನ ಜಾಗತಿಕ ಪರಿಸರಕ್ಕೆ ಇಂಗ್ಲಿಷ್ ಕಲಿಯಲೇಬೇಕು. ಆದರೆ ಆಂಗ್ಲಮಾಧ್ಯಮದಲ್ಲಿ ಓದಿದರೆ ಮಾತ್ರ ಅದು ಸಾಧ್ಯ ಎನ್ನುವುದು ತಪ್ಪು ತಿಳಿವಳಿಕೆ. ಯಾವುದೇ ಮಾಧ್ಯಮ ಆದರೂ ಕನ್ನಡವೂ ಸೇರಿ ಭಾಷೆಯನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನಿರರ್ಗಳವಾಗಿ ಓದಲು ಬರೆಯಲು ಕಲಿತರೆ ಸಾಕು. ಅದಕ್ಕಾಗಿ ದುಬಾರಿಯ ಶಿಕ್ಷಣ ಸಂಸ್ಥೆಗಳೇ ಬೇಕು ಎಂದಲ್ಲ.

### ಹಿತಕರವಾದ ಓದುವ ಸ್ಥಳ

ಓದುವ ಸ್ಥಳ ವಿದ್ಯಾರ್ಥಿಗೆ ಹೊಂದಿಕೆಯಾಗುವಂತೆ ರೂಪಿಸಿಕೊಳ್ಳಬೇಕು. ಗಾಳಿ ಬೆಳಕಿಲ್ಲದ ಕೊಠಡಿ ಉಸಿರು ಕಟ್ಟಿಸಬಹುದು. ಪುಸ್ತಕಗಳು ಕೈಗೆ ಸಿಗುವಂತೆ ಜೋಡಿಸಿಕೊಂಡಿರಬೇಕು. ದೀರ್ಘಕಾಲ ಕುಳಿತುಕೊಂಡು ಓದಿದರೂ ಆಯಾಸವಾಗದಂತೆ ಆಸನ ವ್ಯವಸ್ಥೆ ಮಾಡಿಕೊಳ್ಳಬೇಕು. ಕುಳಿತುಕೊಳ್ಳುವ ಭಂಗಿ ದೇಹದ ಆರೋಗ್ಯಕ್ಕೆ ಪೂರಕ ಆಗುವಂತೆ ಇರಬೇಕು.

ಕೊಠಡಿಯನ್ನು ಸ್ವಚ್ಛಗಾಗಿ ಇಟ್ಟುಕೊಂಡಿರಬೇಕು. ಪುನರ್ಮನನಕ್ಕೆ ಅನುಕೂಲವಾಗುವ ಟಿಪ್ಪಣಿಗಳನ್ನು ಗೋಡೆಗೆ ಹಾಕಿಕೊಳ್ಳಬೇಕು. ಗಣಿತ, ವಿಜ್ಞಾನ ವಿಷಯಗಳ ಸೂತ್ರಗಳನ್ನು ಬರೆದು ಗೋಡೆಗೆ ಹಚ್ಚಿಕೊಳ್ಳಬೇಕು. ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಪ್ರಮುಖ

